ಸಂಯುಕ್ತ ಕರ್ನಾಟಕ

# ದೇಶದ ಅಭಿವೃದ್ಧಿಗೆ ಯುವಜನ ಪಾತ್ರ ಅವಶ್ಯ

**ಗಲ್ಲಿ ನ್ಯೂಸ್**

ನಿಮ್ಮ ಬಡಾವಣೆ, ಕಾಲೋನಿ ಅಥವಾ ನಿಮ್ಮ ಸಂಘ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳ ಬಗ್ಗೆ ನೀವೇ ವರದಿ ಮಾಡಿದರೆ ಹೇಗೆ? ಇದು ಸಾಧ್ಯ. ನೀವು ಮಾಡಬೇಕಿರುವುದು ಇಷ್ಟೆ. ಕಾರ್ಯಕ್ರಮದ ವರದಿಯನ್ನು ಕನ್ನಡದ ನುಡಿ ತಂತ್ರಾಂಶದ ಮೂಲಕ ಬರೆದು ಮಿಂಚಂಚೆ (ಇ-ಮೇಲ್) ಕಳುಹಿಸಿಕೊಡಿ. ಆ ಕಾರ್ಯಕ್ರಮದ ಒಂದು ಛಾಯಾಚಿತ್ರ ಇದ್ದರೆ ಸುದ್ದಿಗೊಂದು ಮೆರಗು.
**readerssk@gmail.**



ಪ್ರಸಕ್ತ ಸಾಲಿನ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ಪದವಿ ಪಡೆದ ಜೈನ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಸಂಭ್ರಮ.

**ಬೆಂಗಳೂರು, ಡಿ. 1:** ಭಾರತ ಜಾಗತಿಕ ನಾಯಕತ್ವ ಮನ್ನಣೆ ಪಡೆಯಬೇಕಾದರೆ ಯುವಜನತೆ ಪಾತ್ರ ಅವಶ್ಯ ಎಂದು ಪದ್ಮಭೂಷಣ ಡಾ. ವಿ.ಕೆ. ಸಾರಸ್ವತ್ ಅಭಿಪ್ರಾಯಪಟ್ಟರು.

ಜೈನ್ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಸ್ತುತ ಯುವಜನತೆಯ ಮೇಲೆ ಅಭೂತಪೂರ್ವ ಪ್ರಭಾವ ಬೀರುತ್ತಿದ್ದು, ಜಾಗತಿಕ ಮಟ್ಟಕ್ಕೆ ಒಗ್ಗಿಕೊಳ್ಳುವ ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತಿವೆ. ಮೂರು ದಶಕಗಳ ಅವಧಿಯಲ್ಲಿ ಹಲವಾರು ಆವಿಷ್ಕಾರಗಳು ನಡೆದಿದ್ದು, ಬಾಹ್ಯಾಕಾಶದಲ್ಲಿ ನಮ್ಮದೆ ಆದ ತಾಂತ್ರಿಕತೆ ಕ್ಷಿಪಣಿ ಬೆಳವಣಿಗೆ ಬಲಿಷ್ಠವಾಗಿ ರೂಪಗೊಂಡಿದೆ.

ಯುವ ಜನಾಂಗ ಹೊಸ ಸಂಶೋಧನೆಗಳನ್ನು ಅಭಿವೃದ್ಧಿಪಡಿಸಿದರೆ ಭಾರತದ ವೈಜ್ಞಾನಿಕ ಪರಿಕಲ್ಪನೆಯ ಕನಸಿಗೆ ನಾಂದಿ ಹಾಡಲು ಸಾಧ್ಯ ಎಂದು ಹೇಳಿದರು.

ಹೊಸ ಬೆಳವಣಿಗೆ, ಹೊಸ ಕಾರ್ಯಕ್ರಮಗಳನ್ನು ಅರಸಿ ನಾವು ಉತ್ಕೃಷ್ಟತೆಯ ಮಾರ್ಗದಲ್ಲಿ ಸಂಚರಿಸಬೇಕಾದರೆ ಹಲವಾರು ಸವಾಲುಗಳು ನಮ್ಮನ್ನು ಎದುರುಗೊಳ್ಳುತ್ತವೆ. ವಿಜ್ಞಾನ ಹಾಗೂ ತಂತ್ರಜ್ಞಾನ ನಿಜಕ್ಕೂ ಇಂತಹ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಪರಿಣಾಮಕಾರಿ ವಿಧಾನಗಳನ್ನು ತೆರೆದಿಡುತ್ತದೆ. ಸಹಜವಾಗಿ ಇದು ಬೌದ್ಧಿಕ ತಿಳುವಳಿಕೆ, ಬದ್ಧತೆ ಹಾಗೂ ಹೆಚ್ಚಿನ ಸಂಕಲ್ಪವನ್ನು ಜನರಿಂದ ನಿರೀಕ್ಷಿಸುತ್ತದೆ.

ಈ ನಿಟ್ಟಿನಲ್ಲಿ, ಇದನ್ನು ಯಶಸ್ವಿಯಾಗಿ ಕೈಗೊಳ್ಳಬಹುದಾದ ಹಲವಾರು ಪ್ರತಿಭಾನ್ವಿತ ಯುವ ಪ್ರತಿಭೆಗಳನ್ನು ನಾನು ಇಲ್ಲಿ ನೋಡುತ್ತಿದ್ದೇನೆ ಎಂದು ವಿದ್ಯಾರ್ಥಿಗಳನ್ನು ಪ್ರಶಂಸಿದರು.

ಜೈನ್ ವಿಶ್ವವಿದ್ಯಾಲಯ ಕುಲಪತಿ ಡಾ. ಎನ್ ಸುಂದರರಾಜನ್, ಕುಲಾಧಿಪತಿ ಪದ್ಮಶ್ರೀ ಡಾ. ಸಿ.ಜಿ. ಕೃಷ್ಣದಾಸ್ ನಾಯರ್, ರಿಜಿಸ್ಟ್ರಾರ್ ಪ್ರೊ.ಎನ್.ವಿ.ಎಚ್. ಕೃಷ್ಣನ್, ಉಪಕುಲಪತಿ ಡಾ. ಸಂದೀಪ್ ಶಾಸ್ತ್ರಿ ಮತ್ತಿತರರು ಉಪಸ್ಥಿತಿರಿದ್ದರು.

ವಾಣಿಜ್ಯ, ಮ್ಯಾನೇಜ್‌ಮೆಂಟ್, ಅರ್ಥಶಾಸ್ತ್ರ, ಜೈವಿಕ ತಂತ್ರಜ್ಞಾನ, ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಸೂಕ್ಷ್ಮ ಜೀವಶಾಸ್ತ್ರ, ಜೈವಿಕ ರಸಾಯನಶಾಸ್ತ್ರ, ಭೌತಶಾಸ್ತ್ರ, ಮನಃಶಾಸ್ತ್ರ, ಸಂಗೀತ, ನೃತ್ಯ, ಸಮೂಹ ಸಂವಹನ, ಆಂಗ್ಲ, ಕನ್ನಡ ಮತ್ತು ಸಂಸ್ಕೃತ ವಿಷಯಗಳಲ್ಲಿ ಉತ್ತೀರ್ಣರಾದ ಒಟ್ಟು 2,422 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಆಶಾ, ಅನುರಾಧ, ಪ್ರಿಯಾಂಕ, ಕೇಶವ್, ಕಾರ್ತಿಕ್ ಸೇರಿದಂತೆ 53 ಪ್ರತಿಭಾನ್ವಿತರಿಗೆ ಚಿನ್ನದ ಪದಕ ಹಾಗೂ ಗೌರಿ, ಸೋನಿಯಾಕುಮಾರಿ, ಸೂರ್ಯರೋಶನಿ, ದಿಶಾ ಸೇರಿದಂತೆ 101 ಪದವಿ, ಸ್ನಾತಕೋತ್ತರ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿಯನ್ನು ನೀಡಲಾಯಿತು.